# ಆಧುನಿಕ ಕಾವ್ಯದಲ್ಲಿ ಮಹಿಳಾ ಸಂವೇದನೆ

ಸಾವಕ್ಕ ದೊಡ್ಡಮನಿ

ಸಂಶೋಧನಾ ವಿದ್ಯಾರ್ಥಿ, ಶಾಸ್ತ್ರೀಯ ಕನ್ನಡ ಭಾಷಾ ಅಧ್ಯಯನ ಸಂಸ್ಥೆ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

DOI: https://doi.org/10.5281/zenodo.17257742

## ABSTRACT:

ಆಧುನಿಕ ಕನ್ನಡ ಕಾವ್ಯದಲ್ಲಿ ಮಹಿಳೆಯ ಸಂವೇದನೆ ಪ್ರಮುಖ ಅಂಶವಾಗಿ ಹೊರಹೊಮ್ಮಿದೆ. ಪುರಾತನ ಕಾಲದಿಂದ ಮಹಿಳೆಯನ್ನು ಸಮಾಜವು ಚಾರಿತ್ರಿಕ ದಾಖಲೆಗಳಿಂದ ದೂರವಿಟ್ಟು ಮೌನಗೊಳಿಸಿದ್ದರೆ, ಆಧುನಿಕ ಕಾಲದಲ್ಲಿ ಆಕೆ ತನ್ನ ಸ್ವರವನ್ನು ಪುರುಷಪ್ರಧಾನ ವ್ಯವಸ್ಥೆಯ ವಿರುದ್ಧ ಎತ್ತಿಕೊಂಡಿದ್ದಾಳೆ. ತನ್ನ ಬದುಕಿನ ನೋವು, ಸಂಕಟ, ಅನ್ಯಾಯ, ಶೋಷಣೆ ಮತ್ತು ಪ್ರತಿರೋಧವನ್ನು ಕಾವ್ಯದ ಮೂಲಕ ವ್ಯಕ್ತಪಡಿಸುತ್ತಿದ್ದಾಳೆ. ಮಹಿಳಾ ಕಾವ್ಯವು ಕೇವಲ ಪುರುಷ ವಿರೋಧಿ ಧೋರಣೆಯಲ್ಲ, ಬದಲಿಗೆ ತನ್ನ ಅಸ್ತಿತ್ವವನ್ನು ದೃಢಪಡಿಸುವ, ಬದುಕನ್ನು ತನ್ನ ದೃಷ್ಟಿಕೋನದಿಂದ ನೋಡುವ ಸಾಹಿತ್ಯದ ಹಾದಿಯಾಗಿದೆ. ಆಧುನಿಕ ಮಹಿಳಾ ಕವಿಗಳು ತಮ್ಮ ಕಾವ್ಯದಲ್ಲಿ ಶೋಷಣೆ, ಲೈಂಗಿಕ ದೌರ್ಜನ್ಯ, ಭಯ, ಸಾಮಾಜಿಕ ಅನ್ಯಾಯಗಳ ಕುರಿತ ಕಳವಳವನ್ನು ಬಿಂಬಿಸುತ್ತಾರೆ. ಈ ಸಾಹಿತ್ಯ ಮಹಿಳೆಯ ಆತ್ಮವಿಶ್ವಾಸಕ್ಕೆ, ಸಾಮಾಜಿಕ ಹೋರಾಟಕ್ಕೆ ಮತ್ತು ಸಾಹಿತ್ಯದ ಪ್ರಾಧಾನ್ಯತೆಗೂ ದಾರಿ ತೋರಿಸುತ್ತದೆ.

## KEYWORDS:

ಮಹಿಳಾ ಸಂವೇದನೆ, ಆಧುನಿಕ ಕಾವ್ಯ, ಶೋಷಣೆ, ಸ್ತ್ರೀವಾದ, ಅಸ್ತಿತ್ವ, ಸಾಮಾಜಿಕ ಹೋರಾಟ.

ಸಾವಿರ ವರ್ಷಗಳ ಇತಿಹಾಸ ಹೊಂದಿರುವ ಕನ್ನಡ ಸಾಹಿತ್ಯದಲ್ಲಿ ಮಹಿಳೆಯ ಕುರಿತ ಸಾಹಿತ್ಯ ಕಾಣಸಿಗುವುದು ತುಂಬಾ ವಿರಳ. ಆಧುನಿಕ ಪೂರ್ವ ಸಾಹಿತ್ಯದಿಂದ ಹಿಡಿದು ಆಧುನಿಕ ಸಾಹಿತ್ಯದಲ್ಲೂ ಮುಂದುವರೆದು ಮಹಿಳೆಯನ್ನು ಚಾರಿತ್ರಿಕ ದಾಖಲೆಯಿಂದ ದೂರತಳ್ಳುವ ಕೆಲಸವನ್ನು ಶಾಸ್ತ್ರಗಳು, ಧರ್ಮಗಳು ಸಂಪ್ರದಾಯ ಸಂಸ್ಕೃತಿಯಲ್ಲಿ ಮಾಡಿರುವುದು ಕಂಡುಬರುತ್ತದೆ. ಇದನ್ನು ಡಾ. ಎಚ್. ಎಲ್. ಪುಷ್ಪಾ ತಮ್ಮ ಕವಿತೆಯಲ್ಲಿ ಈ ರೀತಿಯಾಗಿ ಹೊರಹಾಕುತ್ತಾರೆ. "ತಾತ, ಮುತ್ತಾತರ ಕಾಲದಿಂದ, ಮಠದೇಗುಲಗಳ ದಾಟಿ ಬೀದಿಗೆ ಬಾರದ ಹಾಗೆ ತಡೆದಿವೆ ನೀತಿ ಶಾಸ್ತ್ರಗಳು" ಈ ಮಾತು ದಲಿತ ಸಂವೇದನೆಯ ಹಿನ್ನೆಲೆಯಲ್ಲಿ ಪ್ರಕಟವಾಗಿದ್ದರೂ ಅದು ಮಹಿಳಾ ಧೋರಣೆಯನ್ನು ಕವಿತೆ ಸ್ಫುರಿಸುತ್ತದೆ. ಆದರೆ ಇಂದು ಮಹಿಳೆ ಈ

ಎಲ್ಲ ಶಾಸ್ತ್ರ ನೀತಿಗಳನ್ನು ಮೀರಿ ಪುರುಷ ಸಮಾಜ ತನಗೆ ಮಾಡಿರುವ ಅನ್ಯಾಯವನ್ನು ಆಕೆ ದಾಖಲುಗೊಳಿಸುವ ನಿಟ್ಟಿನಲ್ಲಿ ಸಾಹಿತ್ಯ ರಚನೆಗೆ ತೊಡಗಿಕೊಂಡಿದ್ದಾಳೆ. ಅದು ಅವಶ್ಯಕವೂ ಆಗಿದೆ. ಮಹಿಳೆಯರ ಆಧುನಿಕ ಸಾಹಿತ್ಯದ ಈ ನಡೆಯನ್ನು ಗುರುತಿಸಿ ಸ್ತ್ರೀವಾದದ ಹಿನ್ನೆಲೆಯಲ್ಲಿ ಮಹಿಳೆಯ ಮಾನಸಿಕ ತುಮುಲ ತೊಳಲಾಟಗಳನ್ನು ಸೈದ್ಧಾಂತಿಕ ಆಶಯಗಳನ್ನು ಇಟ್ಟುಕೊಂಡು ಸಾಹಿತ್ಯ ರಚನೆ ನಡೆಯುತ್ತದೆ. ಈ ಸಂದರ್ಭದಲ್ಲಿ ಮಹಿಳೆಯರ ಮಾನಸಿಕ ಹೊಯ್ದಾಟಗಳು ಅವರ ನಿಲುವು ಸಿದ್ಧಾಂತಗಳು ಸಮಾಜದ ಮುಖ್ಯ ವಾಹಿನಿಗೆ ಬರಬೇಕಾಗಿದೆ. ಇಂದು ಹಲವಾರು ಮಹಿಳಾ ಸಾಹಿತಿಗಳು ನಮ್ಮ ನಡುವೆ ತಮ್ಮ ಬರಹಗಳ ಮೂಲಕ ಮಹಿಳಾ ಸಂವೇದನೆಗಳನ್ನು ಹೊರ ಹಾಕುತ್ತಿದ್ದಾರೆ. ಅದು ಆಧುನಿಕ ಸಂದರ್ಭದಲ್ಲಿ ಬಹಳ ಪ್ರಮುಖವಾಗಿವೆ.

ಮಹಿಳಾ ಸಾಹಿತ್ಯದ ಕುರಿತ ಲಕ್ಷ–ನಿರ್ಲಕ್ಷಗಳ ವಿಚಾರ ಪುರುಷ ಪ್ರಧಾನ ಸಾಮಾಜಿಕ ಸಂದರ್ಭದಲ್ಲಿ ಮಹಿಳಾ ಸಾಹಿತ್ಯ ಎಂಬುದು ಪುರುಷ ವಿರೋಧಿ ಸಾಹಿತ್ಯ ರಚನೆ ಎಂಬ ಧೋರಣೆಯಿಂದ ಅವುಗಳನ್ನು ಕಡೆಗಣಿಸಲಾಗುತ್ತಿದೆ. ಸೂಕ್ಷ್ಮವಾಗಿ ನೋಡಿದರೆ ಪ್ರೋತ್ಸಾಹದ ಕಾಳಜಿಯ ಉದಾರತೆಯ ಸಂವೇದನೆಗಳು ಸನ್ನಿವೇಶಗಳು ದ್ವಿಮುಖವಾಗಿರುತ್ತವೆ ಎಂಬುದು ತಿಳಿಯುತ್ತದೆ. ಮಹಿಳಾ ಸಾಹಿತ್ಯವನ್ನು ಕನ್ನಡ ಸಾಹಿತ್ಯ ಎಂದು ಪರಿಗಣಿಸಬೇಕು, ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ನೋಡಿದಾಗ ಓದುಗ ಸಮಾಜದಿಂದ ದೂರಾಗುವ ಅಪಾಯಗಳು ಕಂಡುಬರುತ್ತವೆ. ಆಧುನಿಕ ಸಂದರ್ಭದಲ್ಲಿ ಮಹಿಳಾ ಸಾಹಿತ್ಯ ಎಂಬ ಪರಿಕಲ್ಪನೆ, ಮಹಿಳೆಯರು ಬರೆದ ಸಾಹಿತ್ಯ ಎಂದೇ ತಿಳಿಯಲಾಗಿದೆ. 'ಸ್ತ್ರೀ ಸಂವೇದನೆಯಿಂದ ಯಾರೇ ಸಾಹಿತ್ಯ ರಚಿಸಲಿ ಅದು ಸ್ತ್ರೀ ಸಾಹಿತ್ಯ' ಎಂದು ಪರಿಗಣಿತವಾಗುತ್ತದೆ. ಈ ಮಹಿಳಾ ಸಾಹಿತ್ಯದಲ್ಲಿ ಮಹಿಳೆಯ ತನ್ನ ಸಂವೇದನೆಗಳನ್ನು ಮುಕ್ತವಾಗಿ ಬರಹಕ್ಕೆ ಇಳಿಸಿದ್ದಾಳೆ, ಅವುಗಳು ಸದ್ಯ ಬಹಳ ಪ್ರಮುಖವಾಗಿರುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯ ನಡುವೆ ತನ್ನ ಇಡೀ ಬದುಕನ್ನು ಗಂಡ ಮಕ್ಕಳಿಗಾಗಿ ತೇದು ಸವಿಸಿದ ಸ್ತ್ರೀ ಇಂದು ನನ್ನ ನೋವು ಸಂಕಟ ಮತ್ತು ಪ್ರತಿರೋಧವನ್ನು ಸಾಹಿತ್ಯದ ಮೂಲಕ ಹೊರಹಾಕುತ್ತಿದ್ದಾಳೆ. 'ಎಂ. ಆರ್. ಕಮಲ' ಎನ್ನುವ ಲೇಖಕಿ ನಾನು ಬದಲಾಗಿದ್ದೇನೆ, ನನಗೆ ನನ್ನದೇ ಆದ ವ್ಯಕ್ತಿತ್ವವಿದೆ ಎನ್ನುವ ಅಂಶವನ್ನು ನಾನು ಗಂಡಿನ ಗುಲಾಮಳು ಅಲ್ಲ, ಪುರಾಣ ಕತೆಗಳ ಸೀತೆ ಸಾವಿತ್ರಿಯಂತೆ ಅಲ್ಲ. ನನಗೆ ನನ್ನದೇ ಆದ ಬದುಕಿದೆ ಎಂಬ ಮಾತು ತನ್ನ ಕಾವ್ಯದ ಮೂಲಕ ಈ ರೀತಿಯಾಗಿ ಬರೆಯುತ್ತಾಳೆ.

**‘‘ನಾನು**
**ಗಂಡನೇ ದೇವರೆಂದು**

**ವನವಾಸ ಮಾಡಿ**
**ಅಗ್ನಿಗೆ ಧುಮುಕುವ**
**ಸೀತೆಯಲ್ಲ**
**ನಾನು ಗಂಡನ ಪ್ರಾಣಕ್ಕಾಗಿ**
**ಯಮನ ಹಿಂದೆ**
**ನಾಯಿಯಂತೆ ಅಲೆದ**
**ಸಾವಿತ್ರಿಯೂ ಅಲ್ಲ''**

ಕಾಲ ಬದಲಾಗಿದೆ. ಸ್ತ್ರೀ ಶೋಷಣೆಯ ಕಾಲ ಮುಗಿದು ಹೋಗಿದೆ. ನೀತಿ ಶಾಸ್ತ್ರಗಳನ್ನು ಹಿಂದಿಕ್ಕಿ ನನಗನಿಸಿದೆ. ಬದುಕುವೆ ಎಂಬ ನಿಲುವು ಧ್ವನಿಸುತ್ತಾಳೆ. ಆದರೆ ಇಂಥ ಗಟ್ಟಿತನದ ಮಾತುಗಳ ಜೊತೆಯಲ್ಲಿ ಮಹಿಳೆ ಪುರುಷ ದಬ್ಬಾಳಿಕೆ ದೌರ್ಜನ್ಯ ಅತ್ಯಾಚಾರಗಳಂತಹ ಕೃತ್ಯಗಳಿಂದಾಗಿ ಅವಳು ಇನ್ನೂ ಭಯದ ನೆರಳಿನಲ್ಲಿ ಬದುಕುತ್ತಿದ್ದಾಳೆ. ಇಂದಿನ ದಿನದಲ್ಲಿ ಅತ್ಯಾಚಾರ ಪ್ರಕರಣಗಳನ್ನು ನೋಡಿದರೆ ಪುರಾಣ ಶಾಸ್ತ್ರಗಳು ಹೇಳಿದ ಹಾಗೆ ಕೇಳಿಕೊಂಡಿದ್ದರೆ, ಮಾನಸಿಕ ದೈಹಿಕ ಹಿಂಸೆ ತಾಳಿಕೊಂಡು ಮಾನ ಮತ್ತು ಪ್ರಾಣ ಉಳಿಸಿಕೊಳ್ಳಬಹುದಿತ್ತೇನೋ ಎನ್ನುವ ಸ್ಥಿತಿ ಎದುರಾಗಿದೆ. ಪ್ರತಿದಿನ, ಪ್ರತಿಕ್ಷಣ ನನ್ನ ಬದುಕು ಭಯದಿಂದ ಕೂಡಿದೆ. ಯಾರು ಯಾವಾಗ ದಾಳಿ ಮಾಡುವರು ಎಂಬ ಚಿಂತೆಯಲ್ಲಿ ಮಹಿಳೆ ಕಾಲ ಕಳೆಯುವ ಸ್ಥಿತಿಯಾಗಿದೆ. ಇಂತಹ ಸ್ಥಿತಿಯ ಕುರಿತು 'ಪಿ. ಲಂಕೇಶ' ನೀಲು ಕಾವ್ಯದಲ್ಲಿ ಈ ರೀತಿಯಾಗಿ ಹೇಳುತ್ತಾರೆ.

**''ನನಗೆ ಬೀಳುವ**
**ಕನಸುಗಳು**
**ನನ್ನ ಬದುಕು ಮತ್ತು**
**ಸಾವನ್ನು ಕುರಿತು**
**ಹುಟ್ಟಿಸುವ ಭಯ**
**ವಿಚಿತ್ರವಾದದ್ದು''**

ಮಲಗಿಕೊಂಡಾಗಲೂ ಬೀಳುವ ಕನಸುಗಳು ಸಹ ಬಲತ್ಕಾರ, ಅತ್ಯಾಚಾರ, ಸಾವನ್ನು ಕುರಿತೇ ಇರುತ್ತವೆ ಎಂದು ಹೇಳುತ್ತದೆ. ವಿಕೃತ ಮನಸ್ಸಿನ ಕಾಮವಾಸನೆಯನ್ನು ಪತ್ತೆ ಹಚ್ಚುವುದು ಕಷ್ಟ. ಯಾರು ಬೇಕಾದರೂ ಬಂದೆರಗುವ ಭಯವಿದೆ. ಸಣ್ಣ ಮಕ್ಕಳಿಂದ ಹಿಡಿದು ಮುದುಕಿಯ ಮೇಲೂ ಸಹ ನಡೆಯುವ ಅತ್ಯಾಚಾರ, ಜನ್ಮ ನೀಡಿದ ತಂದೆಯಿಂದ ಹಿಡಿದು ಒಡಹುಟ್ಟಿದ ಸಹೋದರರು ಸಹಿತ ಇಂತಹ ಹೇಯ ಕೃತ್ಯಗಳನ್ನು ಮಾಡುತ್ತಿರುವಾಗ ಪಕ್ಕದ ಬೀದಿಯ ಪುಂಡ ಪೋಕರಿಗಳನ್ನು ಹೇಗೆ ನಂಬಲು ಸಾಧ್ಯ?

**''ಕತ್ತಲಾಯಿತೆ!**
**ಭಯದ ಧೂಳನ್ನು ಹೊತ್ತು ತಂದಿದೆ ಗಾಳಿ**
**ಯಾರು ಬಂದೆರೆಗುವರೋ**

**ಬೆಚ್ಚಿ ಕೂತಿದೆ ಎಳೆಯ ಮೊಗ್ಗು**
**ಯಾರು ಮುರಿಯುವರೋ ನನ್ನ ಕೊರಳನ್ನು**
**ಈ ರಾತ್ರಿ"**

ಎಂದು ಜಿ. ವಿ. ಆನಂದಮೂರ್ತಿ ಅವರು ತಮ್ಮ ಕವಿತೆಯಲ್ಲಿ ಹೆಣ್ಣಿನ ಭಯದ ಸಂವೇದನೆಯನ್ನು ಕನ್ನಡಿಯ ರೀತಿಯಲ್ಲಿ ಹಿಡಿದು ತೋರಿಸಿದ್ದಾರೆ. ಮಹಿಳೆ ಇಂದು ಮನೆಯ ಗೋಡೆಯನ್ನೇ ನಂಬದ ಸ್ಥಿತಿಯಲ್ಲಿ ತನ್ನ ಬದುಕಿನ ನಂಬಿಕೆ ಕಳೆದುಕೊಂಡಿದ್ದಾಳೆ. ಅದನ್ನು ಮಹಿಳಾ ಸಾಹಿತ್ಯ ತನ್ನ ಆಂತರ್ಯದಲ್ಲಿ ಅಡಗಿಸಿಕೊಂಡಿದೆ. ಮಹಿಳೆ ತನ್ನ ಜೊತೆಗೆ ಬದುಕುವ ಜನರ ಕುರಿತು, ಅವರ ನಾಜೂಕಿನ ಶೋಷಣೆಯ ಕುರಿತು ಹಲವಾರು ಕವಿಗಳು, ಕವಿಯತ್ರಿಯರು ತಮ್ಮ ಬರಹದಲ್ಲಿ ದಾಖಲಿಸಿದ್ದಾರೆ. 'ಡಿ. ಬಿ. ರಜಿಯಾ' ಅವರು ತಮ್ಮ ಕವಿತೆಯಲ್ಲಿ ಈ ರೀತಿಯಾಗಿ ನುಡಿಯುತ್ತಾರೆ.

**"ಇವರೆ ನಮ್ಮವರು**
**ನಮ್ಮ ಕಾಯುವವರು**
**ಬೇಲಿಯಾಗಿ ಸುತ್ತ ನಿಂತು**
**ನಮ್ಮ ಮೇಯುವವರು"**

ಹೀಗೆ ತನ್ನ ಸುತ್ತಲ ನಿಂತು ಕಾಯುವ ಭಟರ ಬಂಧನದಲ್ಲಿ ಸಿಕ್ಕು, ಅವರ ಆಹಾರವಾದ ನಾನು ಬಿಡುಗಡೆಯ ಬೆಳಕಿಗಾಗಿ ಬಂಡಾಯವನ್ನು ಒಡ್ಡಿ ಅದರೊಂದಿಗಿನ ಮೌಢ್ಯವನ್ನು ಕಿತ್ತೊಗೆಯುವ ತನ್ನ ನಂಬಿಕೆಯ ಆಸರೆಗೋಲಿಗೆ ಆಶೆ ಪಡುವ ಮಹಿಳೆ, ಬೇಲಿಯೇ ಎದ್ದು ಹೊಲ ಮೇಯ್ದಂತೆ ಯಾರಿಗೆ ದೂರುವುದು? ಅತ್ಯಾಚಾರದ, ಲೈಂಗಿಕ ದೌರ್ಜನ್ಯಗಳು ವರ್ತಮಾನದ ಸಾಮಾಜಿಕ ಬದುಕಿನ ಪಿಡುಗುಗಳಾಗಿ ಕಾಡುವಾಗ ಒಂದು ಕಡೆ ಕಾನೂನುಗಳು ಬಿಗಿಯಾಗುತ್ತಿವೆ. ಮತ್ತೊಂದು ಕಡೆ ಪುರುಷ ಸಮಾಜ, ಅದರ ನಿಯಂತ್ರಣ ಮಾಡುವ ನ್ಯಾಯಾಧೀಶ, ರಾಜಕಾರಣಿ, ಪತ್ರಕರ್ತ, ಆರಕ್ಷಕ, ಇವರೇ ನಮ್ಮ ಮೇಲೆ ಎರಗಿ ಅದರ ನಿಯಂತ್ರಣ ಮಾಡಿ ಕಾನೂನಿನ ದಿಕ್ಕು ತಪ್ಪಿಸುತ್ತಿದ್ದಾರೆ. ನ್ಯಾಯಕ್ಕಾಗಿ ತನ್ನ ಹುದುಗಿಸಿಟ್ಟ ಎಷ್ಟೋ ನೋವುಗಳನ್ನು ಸಾಹಿತ್ಯದ ಮೂಲಕ ಹೊರಹಾಕುತ್ತಿದ್ದಾಳೆ. ಇಂತಹ ಸವಾಲುಗಳಿರುವ ಸಂಕೀರ್ಣ ವ್ಯವಸ್ಥೆಯಲ್ಲಿ ಮಹಿಳೆಗೆ ಎದುರಾಗುವ ಅನುಭವಗಳು ಸಾಹಿತ್ಯದಲ್ಲಿ ಅಭಿವ್ಯಕ್ತಗೊಳ್ಳುತ್ತವೆ.

ಮಹಿಳಾ ಸಾಹಿತ್ಯ ಚರಿತ್ರೆಯನ್ನು ಪ್ರತ್ಯೇಕವಾಗಿ ಪರಿಗಣಿಸುವ ಬದಲು ಮಹಿಳೆಯರು ಬರೆದ ಕೃತಿಗಳನ್ನು, ಬರಹಗಳನ್ನು ಪ್ರಧಾನ ಧಾರೆಯಾದ ಸಾಹಿತ್ಯ ಚರಿತ್ರೆಯ ಪರಂಪರೆಯಲ್ಲಿ ಸೇರಿ ಸಂಶೋಧನೆಗೆ ಒಳಪಡಿಸಬೇಕಾದ ಅವಶ್ಯಕತೆ ಇದೆ. ಕನ್ನಡ ಸಾಹಿತ್ಯದಲ್ಲಿ ಮಹಿಳೆ ತನ್ನ ಸಂವೇದನೆಯನ್ನು ಪುರುಷ ಸಮಾಜದ

ಕುರಿತು ಇರುವ ಅಸಮಧಾನ, ತನ್ನ ಮನದ ತೊಳಲಾಟ, ತಾಕಲಾಟ ಅವುಗಳನ್ನು ಸಾಹಿತ್ಯಕ್ಕೆ, ಬರಹಕ್ಕೆ ಇಳಿಸಿ ಮನಸ್ಸು ಹಗುರಾಗಿಸುವ ಒಂದು ಔಷಧಿ ಎಂಬಂತೆ ಕಾಣಿಸುತ್ತದೆ. ಸಾಮಾಜಿಕವಾಗಿ ಅವಳ ಮನಸ್ಸಿನ ಮಾತುಗಳಿಗೆ ಮನ್ನಣೆ ಸಿಗಬೇಕಾಗಿದೆ. ಅಂತಹ ಮಹಿಳಾ ಪರ ಸಾಹಿತ್ಯ ಪರಂಪರೆ ಹುಟ್ಟುಹಾಕಬೇಕಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಬಲಭೀಮ, (2020), ಮಹಿಳಾ ಸಂವೇದನೆ, ಲಿಖಿತ ಪ್ರಕಾಶನ, ಹಾಸನ.
2. ಶರೀಫಾ ಕೆ., (2020), ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮುಸ್ಲಿಂ ಸಂವೇದನೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.
3. ಶಕುಂತಲಾ ದುರಗಿ, (2019), ಮಹಿಳಾ ಸಾಹಿತ್ಯ ಮತ್ತು ಸಂವೇದನೆ, ಸಮನ್ವಯ ಪ್ರಕಾಶನ, ಕಲಬುರಗಿ.
4. ಮಲ್ಲಿಕಾ ಘಂಟಿ, (2020), ಸ್ತ್ರೀವಾದಿ ಚಿಂತನೆ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

**Funding:**
This study was not funded by any grant.

**Conflict of interest:**
The Authors have no conflict of interest to declare that they are relevant to the content of this article.

**About the License:**
© The Authors 2024. The text of this article is open access and licensed under a Creative Commons Attribution 4.0 International License.